

## ಡಿಡಿಎಲ್‌ಜೆ: ಸಾವಿರಕ್ಕೆ ಕೊನೆ?

ಬರೋಬ್ಬರಿ 19 ವರ್ಷ. 1995ರಿಂದ ಶುರುವಾದ 'ದಿಲ್ ವಾಲೆ ದುಲ್ಹನಿಯಾ ಲೇ ಜಾಯೆಂಗೇ' ಚಿತ್ರದ ಪಯಣ ಮುಂಬೈಯ ಮರಾಠಾ ಮಂದಿರದಲ್ಲಿ ಈಗಲೂ ಮುಂದುವರಿದಿದೆ. ಸುಮಾರು ಎರಡು ದಶಕದ ಅವಧಿಯಲ್ಲಿ ಸಾವಿರಾರು ಬೇರೆ ಸಿನಿಮಾಗಳು ಬಿಡುಗಡೆಯಾಗಿವೆ. ಕೆಲವು ಸಿನಿಮಾಗಳು ನೂರಾರು ಕೋಟಿಯನ್ನು ಎರಡು ಮೂರು ದಿನಗಳಲ್ಲಿಯೇ ಕಂಡು ದಾಖಲೆ ನಿರ್ಮಿಸಿವೆ. ಆದರೆ ಡಿಡಿಎಲ್.ಜೆ ಯಂತೆ ಇಷ್ಟು ಕಾಲ ಜನಮಾನಸದಲ್ಲಿ ಈ ಚಿತ್ರಗಳಾವುವೂ ನಿಲ್ಲಲಿಲ್ಲ. ಶಾರೂಖ್– ಕಾಜೋಲ್ ಅಭಿನಯದ ಈ ಚಿತ್ರ ಈ ಪೀಳಿಗೆಯ ಯುವ ಮನಸ್ಸುಗಳಲ್ಲಿಯೂ ಕಿಚ್ಚು ಹಚ್ಚುತ್ತಿದೆ. ಒಂದೇ ಚಿತ್ರಮಂದಿರದಲ್ಲಿ ಚಿತ್ರವೊಂದು ಸಾವಿರಾರು ಪ್ರದರ್ಶನ ಕಾಣುವುದು ಎಂದರೆ ಸಣ್ಣ ಮಾತೇ?

ಸಿನಿಮಾ ಬಿಡುಗಡೆಯಾದ ಎರಡು ಮೂರು ದಿನಗಳಲ್ಲಿಯೇ ನಕಲಿ ಡಿವಿಡಿ, ಇಂಟರ್ನೆಟ್‌ನಲ್ಲಿ ಲಭ್ಯವಾಗುವ ದಿನಗಳಲ್ಲಿ ಇಂದಿಗೂ ಡಿಡಿಎಲ್ ಜೆ ನೋಡಲು ಧಾವಿಸುತ್ತಿರುವ ಸಿನಿಮಾ ಪ್ರೇಮಿಗಳ ಸಂಖ್ಯೆ ಕುಗ್ಗಿಲ್ಲ. ಪ್ರತಿದಿನದ 11.30ರ ಪ್ರದರ್ಶನವನ್ನು ಡಿಡಿಎಲ್ ಜೆಗಾಗಿಯೇ ಮೀಸಲಿಟ್ಟಿದೆ ಮರಾಠಾ ಮಂದಿರ. ವಾರಾಂತ್ಯದಲ್ಲಿ ಈಗಲೂ ಹೌಸ್ ಫುಲ್!

ಈಗ ಡಿಸೆಂಬರ್ 12ಕ್ಕೆ ಚಿತ್ರದ 1000ನೇ ವಾರದ ಪ್ರದರ್ಶನ ಆದ ಬಳಿಕ ಪ್ರದರ್ಶನವನ್ನು ನಿಲ್ಲಿಸುವ ಚಿಂತನೆ ಮಾಡಲಾಗುತ್ತಿದೆ. 1000ನೇ ವಾರದ ಪ್ರದರ್ಶನದ ನಂತರ ಡಿಡಿಎಲ್ ಜೆಯ ದಾಖಲೆ ಪಯಣಕ್ಕೆ ಅಂತ್ಯ ಹಾಡುವ ಸೂಚನೆ ನೀಡಿದ್ದಾರೆ ಚಿತ್ರಮಂದಿರದ ವ್ಯವಸ್ಥಾಪಕ ನಿರ್ದೇಶಕ ಮನೋಜ್ ದೇಸಾಯಿ. ಆದರೆ ಚಿತ್ರ ನಿರ್ಮಾಣ ಸಂಸ್ಥೆ ಯಶ್ ರಾಜ್ ಫಿಲಂಸ್ ಹಾಗೂ ಅದರ ಷೇರುದಾರರು ಪರಸ್ಪರ ಚರ್ಚೆ ನಡೆಸಿದ ನಂತರವಷ್ಟೇ ತೀರ್ಮಾನ–ವಾಗಲಿದೆ. ಗಳಿಕೆ ತಗ್ಗಿದರೂ ಇನ್ನಷ್ಟು ಕಾಲ ಚಿತ್ರವನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಎಲ್ಲದಕ್ಕೂ ಡಿ. 12ರ ವರೆಗೆ ಕಾಯಬೇಕಷ್ಟೇ.



## 'ರಿವಾಲ್ವರ್ ರಾಣಿ'ಗೆ ವಿಶ್ವ ಮಾನ್ಯತೆ!

ಬಾಲಿವುಡ್‌ನ 'ರಿವಾಲ್ವರ್ ರಾಣಿ', 'ಕ್ವೀನ್' ಕಂಗನಾ ರನೌತ್. ರಾಣಿ ಕಿರೀಟ ತೊಡಿಸಿದ ಈ ಎರಡೂ ಚಿತ್ರಗಳು ಗೆದ್ದದ್ದೇ ತಡ ಕಂಗನಾ ಅದೃಷ್ಟ ಖುಲಾಯಿಸಿದೆ. ಕಂಗನಾರಿಗೆ ಈಗ ಭಾರಿ ಬೇಡಿಕೆ. ಅದರ ಬೆನ್ನಲ್ಲೇ ಆಕೆ 'ಸ್ಮಾಲ್ ವರ್ಲ್ಡ್' ಎಂಬ ಜಾಗತಿಕ ಸಂಸ್ಥೆಯ ಸದಸ್ಯತ್ವ ಪಡೆದುಕೊಂಡಿದ್ದಾಳೆ.

ಸಮಾಜದ ಉನ್ನತ ವರ್ಗದಲ್ಲಿ ಗುರುತಿಸಿಕೊಂಡ ಸಮಾನ ಮನಸ್ಕರ ಕೂಟ ಈ ಸ್ಮಾಲ್ ವರ್ಲ್ಡ್. ತಮ್ಮದೇ ಬೇರೆ ಸಮುದಾಯ ನಿರ್ಮಿಸಿಕೊಳ್ಳುವ ಈ ಸಂಸ್ಥೆಯ ಸದಸ್ಯರು ವಿಶ್ವದ ಯಾವುದೇ ಮೂಲೆಗೆ ಹೋದರೂ ಅಲ್ಲಿನ ಸ್ಥಳೀಯ ಜೀವನ ಸುಖವನ್ನು ಅನುಭವಿಸಲು ಸಕಲ ವ್ಯವಸ್ಥೆ ಮಾಡಿಕೊಡುವ ಹೈಟೆಕ್ ಸಮುದಾಯವಿದು. ಈ ಸಂಸ್ಥೆಯೇ ಸದಸ್ಯತ್ವಕ್ಕಾಗಿ ಸ್ವತಃ ಕಂಗನಾರನ್ನು ಆಹ್ವಾನಿಸಿದೆ. ಅದಕ್ಕೆ ಕಂಗನಾ ಸಹಿಯನ್ನೂ ಹಾಕಿದ್ದಾರಂತೆ. ಫ್ರೀಡಾ ಪಿಂಟೊ ಬಳಿಕ ಈ ಸಂಸ್ಥೆಯ ಸದಸ್ಯತ್ವ ಪಡೆದ ಭಾರತದ ಏಕೈಕ ನಟಿ ಕಂಗನಾ!

ಈ ಸಮುದಾಯದ ಒಳಗಿನವರು ಪರಸ್ಪರ ಮದುವೆಯನ್ನೂ ಆಗುತ್ತಿದ್ದಾರೆ. ನನ್ನಂಥ 'ಒಂಟಿ'ಗೆ ಇದು ಪ್ರಯೋಜನಕಾರಿ. ಮದುವೆಯೆಂದರೆ ಹುಡುಗಾಟ–ವಲ್ಲ ಎಂದಿದ್ದಾರೆ ಕಂಗನಾ. ಸ್ಮಾಲ್ ವರ್ಲ್ಡ್ ಎಂಬ ಸಣ್ಣ ಜಗತ್ತನ್ನು ಪ್ರವೇಶಿ–ಸುತ್ತಿರುವುದು ಮದುವೆಯ ಸಲುವಾಗಿಯೇ ಎಂಬ ಅನುಮಾನವೂ ಹುಟ್ಟಿಕೊಂಡಿದೆ.

■ ಅಮಿ